97 (204) ಶ್ರೀ ಸಿದ್ದುನಾವದಿ (ಜಮಖಂಡಿ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಪಶುಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳ ಸಂಖ್ಯೆ ಎಷ್ಟು ,

ಆ) ಪಶುಚಿಕಿತ್ಸಾಲಯಗಳನ್ನು ಹೊಸದಾಗಿ ಪ್ರಾರಂಭಿಸಲು ಇರುವ ನಿಯಮಾವಳಿಗಳೇನು ,

ಇ) ಜಮಖಂಡಿ ತಾಲ್ಲೂಕಿನಲ್ಲಿರುವ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸುವ ಯೋಜನೆ ಇದೆಯೇ ,

ಈ) ಹಾಗಿದ್ದಲ್ಲಿ ಎಷ್ಟು ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲಾಗುವುದು ಮತ್ತು ಯಾವಾಗ ಮಾಡಲಾಗುವುದು

ಉ) ಪಶುಗಳಿಗೆ ಉಚಿತವಾಗಿ ಹಾಗೂ ಹಣ ಪಡೆದು ಪೂರೈಸಲಾಗುವ ಔಷಧಿಗಳು ಯಾವುವು (ನಂಪೂರ್ಣ ವಿವರ ನೀಡುವುದು) ,

ಊ) ಜಮಖಂಡಿ ತಾಲ್ಲೂಕಿನಲ್ಲಿ ಇನ್ನೂ ಎಷ್ಟು ಊರುಗಳಲ್ಲಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಅರ್ಜಿಗಳು ಬಂದಿದೆ ಹಾಗೂ ಯಾವಾಗ ಪ್ರಾರಂಭಿಸಲಾಗುವುದು ,

ಋ) ಎಲ್ಲಾ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ಸಿಬ್ಬಂದಿಗಳ ಕೊರತೆ ಮತ್ತು ಕಟ್ಟಡಗಳಿವೆಯೇ ,

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿ 24 ಪಶು ವೈದ್ಯ ಸಂಸ್ಥೆಗಳಿವೆ ಅವುಗಳ ವಿವರ ಈ ಕೆಳಕಂಡಂತೆ ಇದೆ

1	ಪಶು ಚಿಕಿತ್ಸಾಲಯ	09
2	ಪಶು ಆಸ್ಪತ್ರೆ	02
3	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	13
	ಒಟ್ಟು	24

ಆ) ರಾಷ್ಟ್ರೀಯ ಕೃಷಿ ಆಯೋಗ 1984ರಲ್ಲಿ ನೂಚಿಸಿರುವಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಬ್ಬ ಪಶುವೈದ್ಯಾಧಿಕಾರಿಗಳನ್ನು ಒಳಗೊಂಡಂತೆ ಒಂದು ಪಶುಚಿಕಿತ್ಸಾಲಯ ಇರಬೇಕು

ಇ) ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಮತ್ತು ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಯೋಜನೆ ರಾಜ್ಯಾದ್ಯಂತ ಜಮಖಂಡಿ ತಾಲ್ಲೂಕು ಒಳಗೊಂಡಂತೆ ಪಶುಪಾಲನಾ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ

ಈ) ಎಲ್ಲಾ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಉನ್ನತೀಕರಿಸುವ ಕಾರ್ಯಕ್ರಮ ಇಲಾಖೆಯಲ್ಲಿರುತ್ತವೆ ಇದಕ್ಕೆ ಯಾವುದೇ ಕಾಲಮಿತಿ ಹಾಕಿಕೊಳ್ಳಲಾಗಿಲ್ಲ ಆದರೆ ಪಶುವೈದ್ಯ ಪದವೀಧರರ ಲಭ್ಯತೆ ಅನುಗುಣವಾಗಿ ವರ್ಷ ವರ್ಷ ಕೆಲವು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಉನ್ನತೀಕರಣ ಮಾಡಲು ಕ್ರಮವಹಿಸಲಾಗುತ್ತಿದೆ ಪ್ರಸ್ತುತ 150 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಉನ್ನತೀಕರಿಸಲು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಹಣಕಾಸು ಇಲಾಖೆಯ ಅನುಮೋದನೆ ನಿರೀಕ್ಷಿಸಲಾಗಿದೆ

ಉ) ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಯಾವುದೇ ಔಷಧಿಗಳಿಗೆ ಹಣ ಪಡೆದುಕೊಳ್ಳಲಾಗುವುದಿಲ್ಲ ಎಲ್ಲಾ ಸೇವೆ ಉಚಿತ ಆದರೆ ಕೃತಕ ಗರ್ಭಧಾರಣೆಗೆ ಮಾತ್ರ ಪ್ರತಿ ವೀರ್ಯ ನಳಿಗೆಗೆ ರೂ 5 00 ಶುಲ್ಕ ಪಡೆದುಕೊಳ್ಳಲಾಗುತ್ತದೆ

ಊ) ಜಮಖಂಡಿ ತಾಲ್ಲೂಕಿನಲ್ಲಿ ಈ ಕೆಳಕಂಡ ಗ್ರಾಮಗಳಲ್ಲಿ ಪಶುಚಕಿತ್ಸಾಲಯ ಪ್ರಾರಂಭಿಸಲು ಪ್ರಸ್ತಾವನೆ ಬಂದಿದೆ

1 ಖಾಜಿ ಬೀಳಗಿ
2 ನಸಾಲಟ್ಟಿ
3 ಮದರಖಂಡಿ
4 ಲಿಂಗನೂರು
5 ಹುನ್ನೂರ
6 ಕೆಲಬೀಳಗೆ
7 ಹಿರೆಪಡಸಲಗಿ

ಡಾ ಡಿ ಎಂ ನಂಜುಂಡಪ್ಪ ವರದಿ ಆಧಾರದ ಮೇಲೆ ಮುಂದುವರಿದ ತಾಲ್ಲೂಕಾಗಿದ್ದು 1,18,599 ಜಾನುವಾರು ಘಟಕಗಳಿದ್ದು ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುಚಿಕಿತ್ಸಾಲಯದಂತೆ 24 ಪಶುವೈದ್ಯ ಸಂಸ್ಥೆಗಳು ಇರಬೇಕಿತ್ತು ಆದರೆ ಈಗಾಗಲೇ 24 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಆದ್ದರಿಂದ ಹೊಸ ಪಶುಚಿಕಿತ್ಸಾಲಯ ಪ್ರಾರಂಭಿಸಲು ಅವಕಾಶವಿರುವುದಿಲ್ಲ

ಋ) ಜಮಖಂಡಿ ತಾಲ್ಲೂಕಿನಲ್ಲಿ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದಿಲ್ಲ ಆದರೆ ಮರಗುದ್ದಿ, ನಾವಳಗಿ ಹಾಗೂ ಚುಂಚನೂರು ಪಶು ಚಕಿತ್ಸಾಲಯಗಳಿಗೆ ಕಟ್ಟಡಗಳಿರುವುದಿಲ್ಲ ಪ್ರಸಕ್ತ ಸಾಲಿನಲ್ಲಿ RIDF XIರ ಅಡಿಯಲ್ಲಿ ಹೊಸಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದ್ದು ಕೆಲಸ ಪ್ರಾರಂಭಿಸಬೇಕಾಗಿದೆ ಈ ಬಾಬ್ತು ಬಾಗಲಕೋಟೆ ಜಿಲ್ಲೆಗೆ ರೂ 49 72 ಲಕ್ಷಗಳ ಅನುದಾನ ಬಿಡುಗಡೆಗೆ ಆದೇಶ ಮಾಡಲಾಗಿದೆ

99 (167) ಶ್ರೀ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?